**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಜಿಎಂ\8600\2015/ಡಿಆರ್-24

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:06/05/2020

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಧಾರವಾಡ ಜಿಲ್ಲೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯಾಗಿದ್ದ ಶ್ರೀ.ಸಿದ್ದಲಿಂಗಯ್ಯ ಶಿ ಹಿರೇಮಠ [ಪ್ರಸ್ತುತ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ] ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಧಾರವಾಡ ಜಿಲ್ಲೆ ಹನುಮಂತ ದೇವಸ್ಥಾನ ಮುರುಘಾಮಠದ ಎದುರು ನಿವಾಸಿಯಾದ ಶ್ರೀ.ಮಾರುತಿ ಗಣಪ ನಾಯ್ಕ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಧಾರವಾಡ ಜಿಲ್ಲೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯಾಗಿದ್ದ ಶ್ರೀ.ಮೇಜರ್ ಸಿದ್ದಲಿಂಗಯ್ಯ ಶಿ. ಹಿರೇಮಠ [ಪ್ರಸ್ತುತ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ] (ಇನ್ನು ಮುಂದೆ, 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಹಿಂದುಳಿದ ವರ್ಗಗಳ ಇಲಾಖೆ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಧಾರವಾಡದಲ್ಲಿ ವಿದ್ಯಾರ್ಥಿನಿಲಯಗಳ ಸಾಮಗ್ರಿ ಖರೀದಿ ಕುರಿತು 2014-15ನೇ ಸಾಲಿನಲ್ಲಿ ಸುಮಾರು ₹3,50,00,000/- ಖರ್ಚುಗಳಲ್ಲಿ ಎದುರುದಾರರು ₹1,37,96,760/-ಗಳಿಗೆ ಸಂಬಂಧಿಸಿದಂತೆ ಮಾತ್ರ ಇ-ಟೆಂಡರ್ ಮಾಡಿದ ದಾಖಲೆಗಳನ್ನು ಪೂರೈಸಿದ್ದಾರೆ. ಉಳಿದ ₹2,33,40,350/-ಗಳನ್ನು ಇ-ಟೆಂಡರ್ ಇಲ್ಲದೇ ಸಾಮಗ್ರಿ ಖರೀದಿಸಿ, ಹಣವನ್ನು ಬೇಕಾಬಿಟ್ಟಿಯಾಗಿ ದುರುಪಯೋಗ ಪಡಿಸಿಕೊಂಡಿದ್ದಾರೆ. ಹಾಗೆಯೇ, ಇನ್ನೊಂದು ಪ್ರಕರಣದಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ವಿದ್ಯಾರ್ಥಿನಿಲಯದ ವಸತಿ ನಿಲಯಕ್ಕೆ ಸುಮಾರು ₹30,00,000/- ಹಣದಲ್ಲಿ ಇ-ಟೆಂಡರ್ ಇಲ್ಲದೇ ಸಾಮಗ್ರಿ ಖರೀದಿಸಿ, ಹಣ ದುರುಪಯೋಗ ಪಡಿಸಿಕೊಂಡಿದೆ. ಈ ಬಗ್ಗೆ ಮೇಲಾಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿ, ಎಲ್ಲಾ ಖರೀದಿಗಳನ್ನು ಕೆಟಿಪಿಪಿ ಕಾಯಿದೆ ಅನ್ವಯವೇ ಮಾಡಿದೆಯೆಂದು ಹೇಳಿ, ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

4. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಗಿನ ದಾಖಲೆಗಳು ಲಭ್ಯವಿದೆ –

1) ಫೆಬ್ರವರಿ, 2015 ರಿಂದ ಮಾರ್ಚ್, 2015 ರವರೆಗಿನ ನಗದು ವಹಿಯ ಪ್ರತಿ;

2) ದಿ:01/02/15 ರಿಂದ 28/02/15 ರವರೆಗಿನ ಅವಧಿಯ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಕಛೇರಿಯ ದೂರವಾಣಿ ಬಿಲ್;

3) ದಿ:31/03/15ರಂದು ಬಿಎಸ್‌ಎನ್‌ಎಲ್‌ಗೆ ಒಟ್ಟು ₹1,038/–ಗಳನ್ನು ಪಾವತಿ ಮಾಡಿದ ರಸೀದಿ;

4) ₹78,000/–ಗಳ ಖಜಾನೆ ಚೆಕ್ ಸಂ:404916 ದಿ:24/03/15ನ್ನು ಸ್ವೀಕರಿಸಿದ ಬಾಬ್ತು ಪ್ರಾಂಶುಪಾಲರು, ಹುಬ್ಬಳ್ಳಿ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಕೋ–ಆಪರೇಟೀವ್ ಹಾಸ್ಪಿಟಲ್, ಹುಬ್ಬಳ್ಳಿ ರವರು ನೀಡಿದ ಸ್ವೀಕೃತಿ ರಸೀದಿ;

5) ₹1,80,000/–ಗಳ ಖಜಾನೆ ಚೆಕ್ ಸಂ:405256 ದಿ:23/03/15ನ್ನು ಸ್ವೀಕರಿಸಿದ ಬಾಬ್ತು ಮುಖ್ಯ ಶಿಕ್ಷಕರು, ಐಎನ್‌ಎ ರಾಮರಾವ್ ಸೈನಿಕ್ ಶಾಲೆ, ಹುಬ್ಬಳ್ಳಿ ರವರು ನೀಡಿದ ಸ್ವೀಕೃತಿ ರಸೀದಿ;

6) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಧಾರವಾಡ ರವರಿಂದ 2014–15ನೇ ಸಾಲಿನ ಶುಲ್ಕ ವಿನಾಯ್ತಿ ಬಾಬ್ತಿಗೆ ಸಂಬಂಧಿಸಿದ ಈ ಕೆಳಗಿನ 20 ಚೆಕ್‌ಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಡಲು ಶ್ರೀ.ಎನ್.ಆರ್.ಗೋಣಗೇರಿ, ವಿಷಯ ನಿರ್ವಾಹಕರು ಸ್ವೀಕರಿಸಿದ ಬಾಬ್ತು ದಿ:28/03/15ರಂದು ನೀಡಿದ ಸ್ವೀಕೃತಿ –

| ಕ್ರ.ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | 619684 | 09/03/2015 | 57947.00 |
| 2 | 619685 | | 9963.00 |
| 3 | 619686 | | 33544.00 |
| 4 | 619687 | | 46502.00 |
| 5 | 619688 | | 26320.00 |
| 6 | 619689 | | 253967.00 |
| 7 | 619690 | | 135996.00 |
| 8 | 619691 | | 20248.00 |
| 9 | 619692 | | 11000.00 |
| 10 | 619693 | | 71828.00 |
| 11 | 619694 | | 38320.00 |
| 12 | 619695 | | 1447953.00 |

BSM/8600/15



| | | | |
|---|---|---|---|
| 13 | 619696 | | 4984.00 |
| 14 | 619697 | | 5100.00 |
| 15 | 619698 | 09/03/2015 | 2923319.00 |
| 16 | 619699 | | 40323.00 |
| 17 | 619700 | | 4085872.00 |
| 18 | 619701 | | 2255.00 |
| 19 | 619702 | | 8451.00 |
| 20 | 619703 | | 50686.00 |
| ಒಟ್ಟು | | | 9274578.00 |

7) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಧಾರವಾಡ ರವರಿಂದ 2014–15ನೇ ಸಾಲಿನ ಶುಲ್ಕ ವಿನಾಯ್ತಿ ಬಾಬ್ತಿಗೆ ಸಂಬಂಧಿಸಿದ ಈ ಕೆಳಗಿನ 16 ಚೆಕ್‌ಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಡಲು ಶ್ರೀ.ಎನ್.ಆರ್.ಗೋಣಗೇರಿ, ವಿಷಯ ನಿರ್ವಾಹಕರು ಸ್ವೀಕರಿಸಿದ ಬಾಬ್ತು ದಿನಾಂಕ ನಮೂದಿರದ ಸ್ವೀಕೃತಿ –

| ಕ್ರ.ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | 619725 | 05/03/2015 | 827.00 |
| 2 | 619726 | | 27001.00 |
| 3 | 619727 | | 3556.00 |
| 4 | 619728 | | 177459.00 |
| 5 | 619729 | | 102842.00 |
| 6 | 619730 | | 4820.00 |
| 7 | 619731 | | 1700.00 |
| 8 | 619732 | | 24503.00 |
| 9 | 619733 | | 1700.00 |
| 10 | 619734 | | 1704413.00 |
| 11 | 619735 | | 2492.00 |
| 12 | 619736 | | 4191605.00 |
| 13 | 619737 | | 34683.00 |
| 14 | 619738 | | 4638276.00 |
| 15 | 619739 | | 3489.00 |
| 16 | 619740 | | 15710.00 |
| ಒಟ್ಟು | | | 10935076.00 |

8) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಧಾರವಾಡ ರವರಿಂದ 2014–15ನೇ ಸಾಲಿನ ಸುಧಾರಣೆ ಬಾಬ್ತಿಗೆ ಸಂಬಂಧಿಸಿದ ಚೆಕ್

ಸಂಖ್ಯೆ:619704 ದಿ:05/03/15 ₹47,04,000/-ಗಳನ್ನು ಶ್ರೀ.ಎನ್.ಆರ್.ಗೋಣಗೇರಿ, ವಿಷಯ ನಿರ್ವಾಹಕರು ಸ್ವೀಕರಿಸಿದ ಬಾಬ್ತು ದಿನಾಂಕ:28/03/15ರ ಸ್ವೀಕೃತಿ;

9) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಧಾರವಾಡ ರವರಿಂದ ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಧಾರವಾಡ ಇದಕ್ಕೆ ಸಂಬಂಧಿಸಿದ ಈ ಕೆಳಗಿನ 05 ಚೆಕ್‌ಗಳನ್ನು ಸಂಬಂಧಪಟ್ಟವರಿಗೆ ವಿತರಿಸಲು ಪಡೆದ ಬಾಬ್ತು ಶ್ರೀ.ಎಫ್.ಎಂ.ದೇಗಾವಿ, ನಿಲಯ ಪಾಲಕರು, ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಧಾರವಾಡ ರವರು ನೀಡಿದ ದಿ:17/03/15ರ ಸ್ವೀಕೃತಿ –

| ಕ್ರ.ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | 403651 | 17/03/2015 | 54084.00 |
| 2 | 403652 | | 39257.00 |
| 3 | 403653 | | 23894.00 |
| 4 | 403654 | | 4990.00 |
| 5 | 403655 | | 71854.00 |
| ಒಟ್ಟು | | | 194079.00 |

10) ಸಿಬ್ಬಂದಿಯವರ ತುಟ್ಟಿಭತ್ಯೆ ಬಾಕಿ ಮತ್ತು ಗಳಿಕೆ ನಗದೀಕರಣ ಸೌಲಭ್ಯದ ಹಣದ ಪೈಕಿ ಶ್ರೀ.ಕಿಶನ್‌ರಾವ್.ಎನ್.ಕುಲಕರ್ಣಿ ರವರಿಗೆ ₹3,138/- ಮತ್ತು ಶ್ರೀ.ಪಿ.ಆರ್.ಹಳಪೇಟಿ, ಜವಾನ ರವರಿಗೆ ₹12,617/-ಗಳನ್ನು (ಒಟ್ಟು ಮೊತ್ತ ₹15,755/-) ಅವರವರ ಬ್ಯಾಂಕ್ ಖಾತೆಗೆ ಜಮಾ ಮಾಡುವಂತೆ ಸೂಚಿಸಿ, ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೇನ್ ಬ್ರಾಂಚ್, ಧಾರವಾಡ ರವರಿಗೆ ಬರೆದ ಪತ್ರ ದಿ:17/03/15;

11) ₹60,000/-ಗಳ ಖಜಾನೆ ಚೆಕ್ ಸಂ:623828 ದಿ:13/03/15ನ್ನು ಸ್ವೀಕರಿಸಿದ ಬಾಬ್ತು ಮುಖ್ಯ ಶಿಕ್ಷಕರು, ಐಎನ್‌ಎ ರಾಮರಾವ್ ಸೈನಿಕ್ ಶಾಲೆ, ಹುಬ್ಬಳ್ಳಿ ರವರು ನೀಡಿದ ಸ್ವೀಕೃತಿ ರಸೀದಿ;

12) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಧಾರವಾಡ ರವರಿಂದ ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಧಾರವಾಡ ಇದಕ್ಕೆ ಸಂಬಂಧಿಸಿದ ಈ ಕೆಳಗಿನ 06 ಚೆಕ್‌ಗಳನ್ನು ಸಂಬಂಧಪಟ್ಟವರಿಗೆ ವಿತರಿಸಲು ಪಡೆದ ಬಾಬ್ತು ಶ್ರೀ.ಎಫ್.ಎಂ.ದೇಗಾವಿ, ನಿಲಯ ಪಾಲಕರು, ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಧಾರವಾಡ ರವರು ನೀಡಿದ ದಿ:13/03/15ರ ಸ್ವೀಕೃತಿ –

| ಕ್ರ.ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | 623822 | 13/03/2015 | 21300.00 |
| 2 | 623823 | | 131676.00 |
| 3 | 623824 | | 81514.00 |

DSM/8600/15



| | | | |
|---|---|---|---|
| 4 | 623825 | 05/03/2015 | 39868.00 |
| 5 | 623826 | | 29853.00 |
| 6 | 623827 | | 4992.00 |
| ಒಟ್ಟು | | | 309203.00 |

13) ಅಧಿಕಾರಿ \ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಹಣ ₹13,270/- ಗಳ ಪೈಕಿ, ಆಯಾಯ ಅಧಿಕಾರಿ \ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವಂತೆ ಸೂಚಿಸಿ, ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೇನ್ ಬ್ರಾಂಚ್, ಧಾರವಾಡ ರವರಿಗೆ ಬರೆದ ಪತ್ರ ದಿ:13/03/15;

14) ಮೆ॥ಜ್ಯೋತಿ ಆಯಿಲ್ ಡಿಸ್ಟ್ರಿಬ್ಯೂಟರ್ಸ್, ಧಾರವಾಡ ರವರ ನಗದು ಬಿಲ್ –

| ಕ್ರ.ಸಂ. | ಬಿಲ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | 72272 | 06/01/2015 | 1095.40 |
| 2 | 74703 | 31/01/2015 | 523.90 |
| 3 | 66927 | 08/01/2014 | 1041.12 |
| 4 | 68525 | 27/11/2014 | 1156.80 |
| 5 | 69641 | 03/12/2014 | 1138.60 |
| 6 | 70193 | 16/12/2014 | 1095.40 |
| 7 | 71415 | 26/12/2014 | 1095.40 |
| 8 | 71661 | 31/12/2014 | 1095.40 |
| 9 | 71216 | 22/12/2014 | 547.70 |
| 10 | 71331 | 24/12/2014 | 547.70 |
| 11 | 67178 | 14/11/2014 | 578.40 |
| ಒಟ್ಟು | | | 9915.82 |

15) ಶ್ರೀ ಮಹಾಲಕ್ಷ್ಮಿ ಪೆಟ್ರೋಲಿಯಮ್ಸ್, ಧಾರವಾಡ ರವರ ನಗದು ಬಿಲ್ –

| ಕ್ರ.ಸಂ. | ಬಿಲ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | 53992 | 14/01/2015 | 1100.00 |
| 2 | 32889 | 21/01/2015 | 1048.00 |
| 3 | 33249 | 27/01/2015 | 1048.00 |
| 4 | 30087 | 19/11/2014 | 1156.00 |
| ಒಟ್ಟು | | | 4352.00 |

16) ಮಾಣಿಕ್‌ಬಾಗ್ ಆಟೋಮೊಬೈಲ್ಸ್ ಪ್ರೈ. ಲಿ., ಹುಬ್ಬಳ್ಳಿ ರವರ ದಿ:28/01/15ರ ಟ್ಯಾಕ್ಸ್ ಇನ್‌ವಾಯ್ಸ್ ಮೊತ್ತ ₹1,341/- ನಗದು ಬಿಲ್;

17) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಧಾರವಾಡ ರವರಿಂದ ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಧಾರವಾಡ ಇದಕ್ಕೆ ಸಂಬಂಧಿಸಿದ ಈ ಕೆಳಗಿನ 03 ಚೆಕ್‌ಗಳನ್ನು ಸಂಬಂಧಪಟ್ಟವರಿಗೆ ವಿತರಿಸಲು ಪಡೆದ ಬಾಬ್ತು ಶ್ರೀ.ಎಫ್.ಎಂ.ದೇಗಾವಿ, ನಿಲಯ ಪಾಲಕರು, ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಧಾರವಾಡ ರವರು ನೀಡಿದ ದಿ:09/03/15ರ ಸ್ವೀಕೃತಿ –

| ಕ್ರ.ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | 619711 | 09/03/2015 | 19652.00 |
| 2 | 619712 | | 29350.00 |
| 3 | 619713 | | 20664.00 |
| ಒಟ್ಟು | | | 69666.00 |

18) ಏಪ್ರಿಲ್, 2014 ರಿಂದ ಮಾರ್ಚ್, 2015 ರವರೆಗಿನ ಒಟ್ಟು ನಿರ್ವಹಣಾ ವೆಚ್ಚದ ಬಾಡಿಗೆ ₹33,312/–ಗಳಿಗೆ ಖಜಾನೆ ಚೆಕ್ ಸಂಖ್ಯೆ:619741 ದಿ:05/03/15ನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾರಿಗಳು, ಮಿನಿ ವಿಧಾನಸೌಧ ನಿರ್ವಹಣಾ ಕೋಶ, ಧಾರವಾಡ ರವರಿಗೆ ಕಳುಹಿಸಿದ ಬಾಬ್ತು ದಿ:09/03/15ರ ಪತ್ರ;

19) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಧಾರವಾಡ ರವರಿಂದ ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಧಾರವಾಡ ಇದಕ್ಕೆ ಸಂಬಂಧಿಸಿದ ಈ ಕೆಳಗಿನ 17 ಚೆಕ್‌ಗಳನ್ನು ಸಂಬಂಧಪಟ್ಟವರಿಗೆ ವಿತರಿಸಲು ಪಡೆದ ಬಾಬ್ತು ಶ್ರೀ.ಎಫ್.ಎಂ.ದೇಗಾವಿ, ನಿಲಯ ಪಾಲಕರು, ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಧಾರವಾಡ ರವರು ನೀಡಿದ ದಿ:15/03/15ರ ಸ್ವೀಕೃತಿ –

| ಕ್ರ.ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | 619705 | 05/03/2015 | 49770.00 |
| 2 | 619706 | | 16891.00 |
| 3 | 619707 | | 18205.00 |
| 4 | 619708 | | 26050.00 |
| 5 | 619709 | | 27645.00 |
| 6 | 619710 | | 24023.00 |
| 7 | 619714 | | 38778.00 |
| 8 | 619715 | | 30904.00 |
| 9 | 619716 | | 20257.00 |
| 10 | 619717 | | 42388.00 |
| 11 | 619718 | | 34455.00 |

BGm/8600/15



| | | | |
|---|---|---|---|
| 12 | 619719 | | 31505.00 |
| 13 | 619720 | | 45049.00 |
| 14 | 619721 | | 37945.00 |
| 15 | 619722 | | 4400.00 |
| 16 | 619723 | | 28276.00 |
| 17 | 619724 | | 4980.00 |
| ಒಟ್ಟು | | | 481521.00 |

20) ಜಿಪಿಎಫ್ ಖಾತೆಯಿಂದ ಭಾಗಶಃ ₹6 ಲಕ್ಷಗಳನ್ನು ಖಜಾನೆ ಚೆಕ್ ಸಂ:618803 ದಿ:04/03/15ನ್ನು ಸ್ವೀಕರಿಸಿದ ಬಾಬ್ತು ಶ್ರೀ.ಸಣ್ಣ ನಾಗಪ್ಪ ಗುಡಿ, ಪ್ರಥಮ ದರ್ಜೆ ಸಹಾಯಕರು ರವರು ನೀಡಿದ ದಿ:04/03/15ರ ಸ್ವೀಕೃತಿ ರಸೀದಿ;

21) ಆಗಸ್ಟ್, 2014 ರಿಂದ ಡಿಸೆಂಬರ್, 2014 ರವರೆಗಿನ ಬಾಡಿಗೆ ಬಾಬ್ತು ₹2,50,000/-ಗಳನ್ನು ಖಜಾನೆ ಚೆಕ್ ಸಂ:617669 ದಿ:02/03/15ನ್ನು ಸ್ವೀಕರಿಸಿದ ಬಾಬ್ತು ಶ್ರೀಮತಿ.ಶಾಂತಾ ಎಸ್ ಸಜ್ಜನ್, ಕಟ್ಟಡ ಮಾಲೀಕರು ನೀಡಿದ ದಿ:02/03/15ರ ಸ್ವೀಕೃತಿ ರಸೀದಿ;

22) ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ಕ್ಕೆ ಸಂಬಂಧಿಸಿದ ನೀರಿನ ಬಿಲ್ ಬಾಬ್ತು ₹1,836/-ಗಳನ್ನು ಖಜಾನೆ ಚೆಕ್ ಸಂಖ್ಯೆ:617406 ದಿ:28/02/15ನ್ನು ಸ್ವೀಕರಿಸಿದ ಬಾಬ್ತು ನಿಲಯ ಪಾಲಕರು ನೀಡಿದ ದಿ:28/02/15ರ ಸ್ವೀಕೃತಿ;

23) ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ಕ್ಕೆ ಸಂಬಂಧಿಸಿದ ವಿದ್ಯುತ್ ಬಿಲ್ ಬಾಬ್ತು ₹12,940/-ಗಳನ್ನು ಖಜಾನೆ ಚೆಕ್ ಸಂಖ್ಯೆ:617405 ದಿ:28/02/15ನ್ನು ಸ್ವೀಕರಿಸಿದ ಬಾಬ್ತು ನಿಲಯ ಪಾಲಕರು ನೀಡಿದ ದಿ:28/02/15ರ ಸ್ವೀಕೃತಿ;

24) ₹2,063/-ಗಳ ವಿದ್ಯುತ್ ಬಿಲ್ ದಿ:10/02/15;

25) ₹2,063/-ಗಳ ವಿದ್ಯುತ್ ಬಿಲ್ ಪಾವತಿಸಿದ ಬಾಬ್ತು ದಿ:26/02/15ರ ರಸೀದಿ;

26) ₹2,637/- ಗಳ ದೂರವಾಣಿ ಬಿಲ್ ದಿ:26/02/15;

27) ₹2,637/- ಗಳ ದೂರವಾಣಿ ಬಿಲ್ ಪಾವತಿಸಿದ ಬಾಬ್ತು ದಿ:26/02/15ರ ರಸೀದಿ;

28) ₹1,225/- ಗಳ ದೂರವಾಣಿ ಬಿಲ್ ದಿ:26/02/15;

29) ₹1,225/- ಗಳ ದೂರವಾಣಿ ಬಿಲ್ ಪಾವತಿಸಿದ ಬಾಬ್ತು ದಿ:26/02/15ರ ರಸೀದಿ;

30) ಕಾಟ್ರಿಡ್ಜ್ ನೀಡ್ಸ್, ಹುಬ್ಬಳ್ಳಿ ರವರು ₹2,400/-ಗಳನ್ನು ಸ್ವೀಕರಿಸಿದ ಬಾಬ್ತು ನೀಡಿದ ದಿ:26/02/15ರ ಸ್ವೀಕೃತಿ ಹಾಗೂ ದಿ:19/12/14ರ ಮೊತ್ತ ₹800/- ಮತ್ತು ದಿ:24/01/15ರ ಮೊತ್ತ ₹1,600/-ಗಳ ನಗದು \ ಕ್ರೆಡಿಟ್ ಬಿಲ್;

31) ₹6,800/-ಗಳನ್ನು ಚೆಕ್ ಸಂಖ್ಯೆ:401331 ದಿ:26/02/15ರಲ್ಲಿ ಸ್ವೀಕರಿಸಿದ ಬಾಬ್ತು ಜನತಾ ಬಜಾರ್, ಧಾರವಾಡ ರವರು ನೀಡಿದ ಹಣ ಸಂದಾಯ ರಸೀದಿ ಸಂಖ್ಯೆ:765 ದಿ:26/02/15 ಹಾಗೂ ಜನತಾ ಬಜಾರ್, ಧಾರವಾಡ ರವರು ಅದೇ ಮೊತ್ತಕ್ಕೆ ನೀಡಿದ ಕ್ರೆಡಿಟ್ ಬಿಲ್ ಸಂಖ್ಯೆ:402;

32) ಮೆ॥ವಿ.ವಿ.ತುರಮುರಿ & ಸನ್ಸ್ ರವರು ₹4,620/-ಗಳನ್ನು ಚೆಕ್ ಸಂಖ್ಯೆ:401330 ದಿ:26/02/15ನ್ನು ಸ್ವೀಕರಿಸಿದ ಬಾಬ್ತು ನೀಡಿದ ಸ್ವೀಕೃತಿ ಹಾಗೂ ದಿ:19/08/14ರ ಮೊತ್ತ ₹4,620/-ಗಳ ನಗದು ಬಿಲ್;

33) ವಿದ್ಯಾರ್ಥಿನಿಲಯಕ್ಕೆ ಕಿರಾಣಿ ಸಾಮಾಗ್ರಿಗಳ ಸಾಗಾಣಿಕೆ ಬಾಬ್ತು ಶ್ರೀ.ಮಾಲತೇಶ್ ರವರು ₹250/– ಗಳನ್ನು ಸ್ವೀಕರಿಸಿದ ದಿ:19/08/14ರ ಹಣ ಸಂದಾಯ ರಸೀದಿ;

34) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಧಾರವಾಡ ರವರು ದಿ:26/02/15ರಂದು ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೇನ್ ಬ್ರಾಂಚ್, ಧಾರವಾಡ ರವರಿಗೆ ಸಿಬ್ಬಂದಿಯವರ ಪ್ರವಾಸ ಭತ್ಯೆಯನ್ನು ಅವರವರ ಉಳಿತಾಯ ಖಾತೆಗೆ ₹11,435/–ಗಳನ್ನು ಜಮಾ ಮಾಡಲು ಕೋರಿ ಬರೆದ ಪತ್ರ;

35) 2014–15ನೇ ಸಾಲಿನ ಶುಲ್ಕ ವಿನಾಯಿತಿ ಬಾಬ್ತಿಗೆ ಸಂಬಂಧಿಸಿದಂತೆ, ಒಟ್ಟು ₹2,93,08,224/– ಗಳ ಒಟ್ಟು 20 ಚೆಕ್‌ಗಳನ್ನು ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟವರಿಗೆ ಕಳುಹಿಸಿಕೊಡಲು ಪಡೆದಿರುತ್ತೇನೆಂದು ಶ್ರೀ.ಎಸ್.ಆರ್.ಗೋಣಗೇರಿ, ಪ್ರಥಮ ದರ್ಜೆ ಸಹಾಯಕರು ನೀಡಿದ ದಿನಾಂಕ:24/02/15ರ ಸ್ವೀಕೃತಿ;

36) ಮೆ॥ನಾಯ್ಕ ಆಟೋಮೊಬೈಲ್ಸ್, ಕಲಘಟಗಿ ರವರ ದಿ:02/12/14ರ ಮೊತ್ತ ₹1,141.20 ಗಳ ಬಿಲ್;

37) ಬಿ.ಜಿ.ದೊಡ್ಡಮನಿ & ಬ್ರದರ್ಸ್, ಧಾರವಾಡ ರವರ ದಿ:07/12/14ರ ನಗದು ಬಿಲ್ ಸಂಖ್ಯೆ:9959 ಮೊತ್ತ ₹1,138.60 ಮತ್ತು ನಗದು ಬಿಲ್ ಸಂಖ್ಯೆ:10350 ದಿ:10/12/14 ಮೊತ್ತ ₹1,138.60 ಗಳ ಬಿಲ್;

38) ಆಶೀರ್ವಾದ ಕೆವಸ್‌ಕೆ, ಗುಡಗೇರಿ ಬಿಲ್ ಸಂಖ್ಯೆ:5929 ದಿ:18/12/14 ಮೊತ್ತ ₹1,113.80;

39) ಜವಳಿ ಟೈರ್ ಝೋನ್, ಧಾರವಾಡ ರವರ ದಿ:07/12/14ರ ಬಿಲ್, ಮೊತ್ತ ₹50/–;

40) ವಿದ್ಯಾರ್ಥಿನಿಲಯಗಳಿಗೆ ಸೋಲಾರ್ ಲೈಟ್ ಸಂಬಂಧ ₹5,54,925/–ಗಳನ್ನು ಖಜಾನೆ ಚೆಕ್ ಸಂಖ್ಯೆ:407390 ದಿ:28/03/15ನ್ನು ಸ್ವೀಕರಿಸಿದ ಬಾಬ್ತು ಕಲ್ಯಾಣಿ ಅಸೋಸಿಯೇಟ್ಸ್ ರವರ ಸ್ವೀಕೃತಿ ದಿ:06/06/15;

41) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳಿಗೆ ಗಣಕಯಂತ್ರ ಟೈಪಿಂಗ್, ಸಿಸಿ ಕ್ಯಾಮೆರಾ ಸಂಬಂಧ ₹53,39,000/–ಗಳನ್ನು ಖಜಾನೆ ಚೆಕ್ ಸಂಖ್ಯೆ:407388 ದಿ:28/03/15ನ್ನು ಸ್ವೀಕರಿಸಿದ ಬಾಬ್ತು ಸೋಮೀಂದ್ರ ಮಾರ್ಕೆಟಿಂಗ್, ಹುಬ್ಬಳ್ಳಿ ರವರ ಸ್ವೀಕೃತಿ ದಿ:06/06/15;

42) ವಿದ್ಯಾರ್ಥಿನಿಲಯಗಳಿಗೆ ಸೋಲಾರ್ ಲೈಟ್ ಸಂಬಂಧ ₹21,64,208/–ಗಳನ್ನು ಖಜಾನೆ ಚೆಕ್ ಸಂಖ್ಯೆ:405258 ದಿ:23/03/15ನ್ನು ಸ್ವೀಕರಿಸಿದ ಬಾಬ್ತು ಕಲ್ಯಾಣಿ ಅಸೋಸಿಯೇಟ್ಸ್ ರವರ ಸ್ವೀಕೃತಿ ದಿ:06/06/15;

43) ಧಾರವಾಡ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ 125 2–ಟೈರ್ ಕಾಟ್‌ಗಳನ್ನು ಸರಬರಾಜು ಮಾಡಿದ ಬಾಬ್ತು ದಿ:23/03/15ರ ಚೆಕ್ ಸಂಖ್ಯೆ:405259 ಮೂಲಕ ₹19,32,187/–ಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರಿಗೆ ಬರೆದ ಪತ್ರ ದಿ:10/04/15;

44) ಧಾರವಾಡ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಸೋಲಾರ್ ವಾಟರ್ ಹೀಟರ್‌ಗಳನ್ನು ಸರಬರಾಜು ಮಾಡಿದ ಬಾಬ್ತು ದಿ:23/03/15ರ ಚೆಕ್

BSM/8600/15



ಸಂಖ್ಯೆ:405257 ಮೂಲಕ ₹29,62,440/–ಗಳನ್ನು ಮೆ॥ಕಲ್ಯಾಣಿ ಅಸೋಸಿಯೇಟ್ಸ್, ಹುಬ್ಬಳ್ಳಿ ರವರಿಗೆ ಬರೆದ ದಿ:10/04/15ರ ಪತ್ರ;

45) ಕಾಟ್‌ಗಳನ್ನು ಸರಬರಾಜು ಮಾಡಿದ ಬಾಬ್ತು ದಿ:28/03/15ರ ಚೆಕ್ ಸಂಖ್ಯೆ:407389 ಮೂಲಕ ₹61,83,000/–ಗಳನ್ನು ಸ್ವೀಕರಿಸಿದ ಬಾಬ್ತು ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರು ನೀಡಿದ ದಿ:22/06/15ರ ಸ್ವೀಕೃತಿ;

46) ₹2,23,230/– ಮತ್ತು ₹7,44,528/–ಗಳನ್ನು ಕ್ರಮವಾಗಿ ಚೆಕ್ ಸಂಖ್ಯೆ:5296177 ಮತ್ತು 5296176 ದಿ:31/10/2015ರ ಮೂಲಕ ನೀಡಿದೆಯೆಂದು ಮೆ॥ಹೆಗಡೆ ಎಂಟರ್‌ಪ್ರೈಸಸ್, ಹುಬ್ಬಳ್ಳಿ ರವರಿಗೆ ಬರೆದ ದಿ:11/11/15ರ ಪತ್ರ;

47) ಚೆಕ್ ಸಂಖ್ಯೆ:466429 ದಿ:24/03/2016ರಲ್ಲಿ ₹3,84,018/– ಮತ್ತು ಚೆಕ್ ಸಂಖ್ಯೆ:296176 ದಿ:31/10/15ರಲ್ಲಿ ₹7,44,528/–ಗಳನ್ನು ಸ್ವೀಕರಿಸಿದ ಬಾಬ್ತು ಮೆ॥ಹೆಗಡೆ ಎಂಟರ್‌ಪ್ರೈಸಸ್, ಹುಬ್ಬಳ್ಳಿ ರವರು ನೀಡಿದ ಬರೆದ ದಿ:11/11/15ರ ಎರಡು ರಸೀದಿಗಳು;

48) ಸೋಮೀಂದ್ರ ಮಾರ್ಕೆಟಿಂಗ್, ಹುಬ್ಬಳ್ಳಿ ರವರು ₹53,39,000/–ಗಳಿಗೆ ನೀಡಿದ ದಿ:17/03/15ರ ಕ್ರೆಡಿಟ್ ಬಿಲ್;

49) ಮೆ॥ಹೆಗಡೆ ಎಂಟರ್‌ಪ್ರೈಸಸ್, ಹುಬ್ಬಳ್ಳಿ ರವರ ಬಿಲ್ ಸಂಖ್ಯೆ:3316 ದಿ:07/07/15 ₹2,23,233/–;

50) ಮೆ॥ಹೆಗಡೆ ಏಜೆನ್ಸೀಸ್, ಹುಬ್ಬಳ್ಳಿ ರವರ ಇನ್‌ವಾಯ್ಸ್ ಸಂಖ್ಯೆ:350 ದಿ:07/07/15 ₹7,44,528/–;

51) ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರ ಕ್ರೆಡಿಟ್ ಬಿಲ್ ಸಂಖ್ಯೆ:04135 ದಿ:11/03/15ರ ₹61,94,000/–;

52) ಅಕ್ಷಯ ಜ್ಯೋತಿ ಪ್ರೈ. ಲಿ., ರವರ ದಿ:12/03/15ರ ಇನ್‌ವಾಯ್ಸ್ ದಿ:12/03/15 ₹5,54,925/–;

53) ಅಕ್ಷಯ ಜ್ಯೋತಿ ಪ್ರೈ. ಲಿ., ರವರ ದಿ:12/03/15ರ ಇನ್‌ವಾಯ್ಸ್ ದಿ:12/03/15 ₹21,64,208/–.

5. ಮೇಲೆ ಹೇಳಿದ ಖರ್ಚುಗಳ ಪೈಕಿ ಕ್ರಮ ಸಂಖ್ಯೆ:2, 3 ಮತ್ತು 26 ರಿಂದ 29ರ ಖರ್ಚುಗಳು ಬಿಎಸ್‌ಎನ್‌ಎಲ್‌ಗೆ ದೂರವಾಣಿ ಬಿಲ್ ಪಾವತಿಗೆ ಸಂಬಂಧಿಸಿದೆ. ಕ್ರಮ ಸಂಖ್ಯೆ:10 ಮತ್ತು 13 ಸಿಬ್ಬಂದಿಗಳ ತುಟ್ಟಿಭತ್ಯೆ, ಗಳಿಕೆ ರಜೆ ನಗದೀಕರಣ ಮತ್ತು ವೈದ್ಯಕೀಯ ವೆಚ್ಚ ಮರುಪಾವತಿಗೆ ಸಂಬಂಧಿಸಿದೆ. ಕ್ರಮ ಸಂಖ್ಯೆ:20 ಸಿಬ್ಬಂದಿಗೆ ಜಿಪಿಎಫ್ ಹಣ ಪಾವತಿಗೆ ಸಂಬಂಧಿಸಿದೆ. ಕ್ರಮ ಸಂಖ್ಯೆ:23 ರಿಂದ 25 ವಿದ್ಯಾರ್ಥಿನಿಲಯಗಳ ವಿದ್ಯುತ್ ಬಿಲ್ ಪಾವತಿಗೆ ಸಂಬಂಧಿಸಿದೆ.

6. ಉಳಿದಂತೆ ಹಿಂದಿನ ಖಂಡಿಕೆ–4ರ ಕ್ರಮ ಸಂಖ್ಯೆ:14 ರಿಂದ 16, 30 ರಿಂದ 33, 36 ರಿಂದ 53ರ ಖರೀದಿಗಳಿಗೆ [ಒಟ್ಟು ಮೊತ್ತ ₹3,64,88,618.82] ಸಂಬಂಧಿಸಿದ ಯಾವುದೇ ದಾಖಲೆಗಳಿಲ್ಲ.

ಮುಂದುವರೆದು, ಕ್ರಮ ಸಂಖ್ಯೆ:4 ರಿಂದ 9, 11, 12, 17 ರಿಂದ 19, 21, 22, 34 ಮತ್ತು 35ರ ಖರ್ಚಿಗೆ [ಒಟ್ಟು ಮೊತ್ತ ₹5,58,90,930/-] ಸಂಬಂಧಿಸಿದ ದಾಖಲೆಗಳಿಲ್ಲ. ಎದುರುದಾರರು ಬಿಸಿಎಂ ಜಿಲ್ಲಾ ಅಧಿಕಾರಿ, ಧಾರವಾಡ ಆಗಿ ದಿ:01/01/14 ರಿಂದ 11/09/2015ರವರೆಗೆ ಕಾರ್ಯನಿರ್ವಹಿಸಿದ್ದಾರೆ. ಸದರಿ ಮೊತ್ತವು ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ. ಕಾರಣ, ಸದರಿಯವರ ದುರ್ನಡತೆ \ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ, ಇಲಾಖಾ ವಿಚಾರಣೆ ನಡೆಸುವುದು ಅವಶ್ಯವಾಗಿದೆ.

8. ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಸದರಿಯವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 6/5

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ-1,**
**ಕರ್ನಾಟಕ ರಾಜ್ಯ.**

6/5